## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 160 ಬರಪೀಡಿತ ಬ್ಲಾಕುಗಳಲ್ಲಿ ಪ್ರಥಮ್ ಸಂಸ್ಥೆಯ ಸಹಯೋಗದೊಂದಿಗೆ "ಬೇಸಿಗೆ ಸಂಭ್ರಮ" ಕಾರ್ಯಕ್ರಮವನ್ನು ಮತ್ತು "ಬಿಸಿ ಊಟ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ 8 ಎಂಎಂಎಸ್ 2017 ದಿನಾಂಕ: 18.03.2017

2) ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಟಿಇಸಿ/ಓಕ/12/2016-17 ದಿನಾಂಕ 18.01.2017.

**ಪ್ರಸ್ತಾವನೆ:**

MAHANTAGOUD T PATIL SWCM KSPSTA

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರದ ಆದೇಶದಲ್ಲಿ 2016-17ನೇ ಸಾಲಿನಲ್ಲಿ ರಾಜ್ಯದ ಒಟ್ಟು 30 ಜಿಲ್ಲೆಗಳ ಬರಪೀಡಿತ ಎಂದು ಘೋಷಿಸಿರುವ 160 ತಾಲ್ಲೂಕುಗಳ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 01 ರಿಂದ 08ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಕ್ಷರ ದಾಸೋಹ ಬಿಸಿಯೂಟ ಕಾರ್ಯಕ್ರಮವನ್ನು ಶಾಲೆಗಳ ರಜಾ ಅವಧಿಯಲ್ಲಿ ಅಂದರೆ ದಿನಾಂಕ 11.04.2017 ರಿಂದ 27.05.2017ರವರೆಗೆ ರವಿವಾರ ಮತ್ತು ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ ಅಂದರೆ ಒಟ್ಟು 38 ದಿನಗಳಿಗೆ ಜಾರಿಗೊಳಿಸುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ. ಸಹ ನಿರ್ದೇಶಕರು (ಮಧ್ಯಾಹ್ನ ಬಿಸಿ ಊಟ ಕಾರ್ಯಕ್ರಮ) ಇವರು ಪ್ರತಿ ಗ್ರಾಮದಲ್ಲಿ ಒಂದು ಶಾಲೆಯಂತೆ ಒಟ್ಟು 33251 ಶಾಲೆಗಳಲ್ಲಿ ಅಂದಾಜು 20.27 ಲಕ್ಷ ವಿದ್ಯಾರ್ಥಿಗಳಿಗೆ ಮದ್ಯಾಹ್ನ ಬಿಸಿ ಊಟವನ್ನು ನೀಡಲಾಗುವುದು ಎಂದು ವರದಿ ಮಾಡಿರುತ್ತಾರೆ. ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆ ಶಾಲೆಗಳಲ್ಲಿ ಪ್ರತಿ ಶಾಲೆಗೆ ಒಬ್ಬ ಶಿಕ್ಷಕರ ಹಾಜರಾತಿ ಅವಶ್ಯಕವಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರ ಏಕ ಕಡತದ ಪ್ರಸ್ತಾವನೆಯಲ್ಲಿ 160 ಬರಪೀಡಿತ ತಾಲ್ಲೂಕುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ 150ಕ್ಕಿಂತ ಹೆಚ್ಚಿರುವ 7049 ಶಾಲೆಗಳಲ್ಲಿ ಬೇಸಿಗೆ ಶಿಬಿರ ಮೂಲಕ ಪೂರಕ ಕಲಿಕೆ ನಡೆಸುವ ಸಂಬಂಧ ಪ್ರಥಮ್ ಸಂಸ್ಥೆಯ ಸಹಯೋಗದೊಂದಿಗೆ "ಬೇಸಿಗೆ ಸಂಭ್ರಮ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪ್ರಥಮ್ ಸಂಸ್ಥೆ ಹಾಗೂ ಅನುಭವಿ ಸಂಪನ್ಮೂಲ ವ್ಯಕ್ತಿಗಳು/ಶಿಕ್ಷಕರನ್ನೊಳಗೊಂಡ ತಂಡದ ಮೂಲಕ ಪರಿಷ್ಕರಿಸಿ ಅಂತಿಮಗೊಳಿಸಲು ಹಾಲಿ ಲಭ್ಯವಿರುವ ಅನುದಾನವನ್ನು ಬಳಸಿಕೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಕಾರ್ಯಕ್ರಮದಡಿ 5 ಮತ್ತು 6ನೇ ತರಗತಿಯ ವಿದ್ಯಾರ್ಥಿಗಳಿಗೆ ಪೂರಕ ಬೋಧನೆಯನ್ನು ನೀಡಲಾಗುವುದು. ಪ್ರತಿ ಶಾಲೆಗೆ 50 ವಿದ್ಯಾರ್ಥಿಗಳಂತೆ ಅಂದಾಜು 3.52 ಲಕ್ಷ ವಿದ್ಯಾರ್ಥಿಗಳಿಗೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದು.

ಈ ಪೂರಕ ಬೋಧನೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆ 7049 ಶಾಲೆಗಳಲ್ಲಿ ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರ ಅಗತ್ಯವಿರುತ್ತದೆ. "ಬೇಸಿಗೆ ಸಂಭ್ರಮ" ಕಾರ್ಯಕ್ರಮ ಅನುಷ್ಠಾನಗೊಳ್ಳುವ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿ ಊಟ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಹೆಚ್ಚುವರಿ ಶಿಕ್ಷಕರ ಅಗತ್ಯವಿರುವುದಿಲ್ಲ. "ಬೇಸಿಗೆ ಸಂಭ್ರಮ" ಕಾರ್ಯಕ್ರಮಕ್ಕಾಗಿ ನಿಯೋಜನೆಗೊಂಡ ಇಬ್ಬರು ಶಿಕ್ಷಕರ ಪೈಕಿ ಒಬ್ಬ ಶಿಕ್ಷಕರನ್ನು ಮಧ್ಯಾಹ್ನದ ಬಿಸಿ ಊಟ ಕಾರ್ಯಕ್ರಮವನ್ನು ನೋಡಿಕೊಳ್ಳಲು ನಿಯೋಜಿಸಲಾಗುವುದು.

MAHANTAGOUD T PATIL
SWCM KSPSTA

ಮಧ್ಯಾಹ್ನದ ಬಿಸಿ ಊಟ ಮತ್ತು "ಬೇಸಿಗೆ ಸಂಭ್ರಮ" ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಶಾಲೆಗಳಿಗೆ ಹಾಜರಾಗಬೇಕಿರುವ ಶಿಕ್ಷಕರ ಅಗತ್ಯತೆಯನ್ನು ಈ ಕೆಳಗಿನಂತೆ ಅಂದಾಜಿಸಿದೆ:

i. 38 ದಿನಗಳಿಗಾಗಿ ಮಾತ್ರ ಮಧ್ಯಾಹ್ನ ಬಿಸಿ ಊಟ ಕಾರ್ಯಕ್ರಮ ಅನುಷ್ಠಾನಕ್ಕಾಗಿ 25202 ಶಿಕ್ಷಕರು.

ii. ಮಧ್ಯಾಹ್ನದ ಬಿಸಿ ಊಟ ಮತ್ತು "ಬೇಸಿಗೆ ಸಂಭ್ರಮ" ಕಾರ್ಯಕ್ರಮಗಳಿಗೆ 38 ದಿನಗಳಿಗಾಗಿ 7049 ಶಿಕ್ಷಕರು.

iii. "ಬೇಸಿಗೆ ಸಂಭ್ರಮ" ಕಾರ್ಯಕ್ರಮದ ಅನುಷ್ಠಾನಕ್ಕಾಗಿ 30 ದಿನಗಳಿಗೆ ಮಾತ್ರ 7049 ಶಿಕ್ಷಕರು.

ಹೆಚ್ಚುವರಿಯಾಗಿ ಕಾರ್ಯಕ್ರಮ ಅನುಷ್ಠಾನದ ಮೇಲುಸ್ತುವಾರಿಗಾಗಿ ಅಂದಾಜು 2000 ಸಮೂಹ ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಲಾಗುವುದು.

ಕರ್ನಾಟಕ ನಾಗರಿಕ ಸೇವಾ ನಿಯಮಗಳ ಪ್ರಕಾರ ಶಿಕ್ಷಕರುಗಳು ರಜೆ ಇಲಾಖೆಯ ನೌಕರರಾದ್ದರಿಂದ ರಜೆ ಅವಧಿಯಲ್ಲಿ ಅವರನ್ನು ಕರ್ತವ್ಯಕ್ಕೆ ನಿಯೋಜಿಸಿದಲ್ಲಿ ಪ್ರತಿ 3 ಕೆಲಸದ ದಿನಗಳಿಗೆ ಒಂದರಂತೆ ಗಳಿಕೆ ರಜೆಗೆ ಅರ್ಹರಿರುತ್ತಾರೆ. ಗಳಿಕೆ ರಜೆಗೆ ಬದಲಾಗಿ ಸಂಭಾವನೆಯನ್ನು ನಗದು ರೂಪದಲ್ಲಿ ನೀಡುವಂತೆ ಶಿಕ್ಷಕರುಗಳಿಂದ ಕೋರಿಕೆಗಳು ಬಂದಿರುತ್ತವೆ. ಈ ವಿಷಯವನ್ನು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದವರ ಜೊತೆ ಸಹ ಚರ್ಚಿಸಲಾಗಿದ್ದು ಕಾರ್ಯಸಾಧುವಾಗಿರುವುದು ಕಂಡುಬರುತ್ತದೆ.

ಪ್ರಾಥಮಿಕ ಶಾಲಾ ಶಿಕ್ಷಕರುಗಳ ಸೇವೆಯನ್ನು ಬಳಸಿಕೊಳ್ಳುವ ಸಹ ನಿರ್ದೇಶಕರು (ಮಧ್ಯಾಹ್ನ ಬಿಸಿ ಊಟ ಕಾರ್ಯಕ್ರಮ) ಮತ್ತು ನಿರ್ದೇಶಕರು(ಡಿಎಸ್ಇಆರ್‌ಟಿ) ಇವರುಗಳ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ ಮತ್ತು ಕೆಳಗಿನಂತೆ ಆದೇಶವನ್ನು ಹೊರಡಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಇಡಿ 08 ಎಂಎಂಎಸ್ 2017(ಭಾ) ಬೆಂಗಳೂರು ದಿನಾಂಕ: 13.04.2017

1. ಸರ್ಕಾರದ ಅನುಮೋದನೆಯನ್ನು ಈ ಕೆಳಗಿನವುಗಳಿಗೆ ನೀಡಿದೆ

   i. ಬರ ಪೀಡಿತ ತಾಲ್ಲೂಕುಗಳಲ್ಲಿ ಮಾತ್ರ ಮಧ್ಯಾಹ್ನದ ಬಿಸಿ ಊಟ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 38 ದಿನಗಳಿಗೆ 25202 ಶಿಕ್ಷಕರು/ಮುಖ್ಯ ಶಿಕ್ಷಕರನ್ನು ಬಳಸಿಕೊಳ್ಳಲು.

   ii. ಮಧ್ಯಾಹ್ನದ ಬಿಸಿ ಊಟ ಕಾರ್ಯಕ್ರಮ ಮತ್ತು "ಬೇಸಿಗೆ ಸಂಭ್ರಮ" ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 38 ದಿನಗಳಿಗಾಗಿ 7049 ಶಿಕ್ಷಕರು/ಮುಖ್ಯ ಶಿಕ್ಷಕರನ್ನು ಬಳಸಿಕೊಳ್ಳಲು.

   iii. "ಬೇಸಿಗೆ ಸಂಭ್ರಮ" ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಹೆಚ್ಚುವರಿಯಾಗಿ 7049 ಶಿಕ್ಷಕರು ಮತ್ತು 2000 ಸಮೂಹ ಸಂಪನ್ಮೂಲ ವ್ಯಕ್ತಿಗಳನ್ನು ಶಾಲೆಗಳಲ್ಲಿ 30 ದಿನಗಳವರೆಗೆ ಬಳಸಿಕೊಳ್ಳಲು.

MAHANTAGOUD T PATIL SWCM KSPSTA

2. ಮೇಲೆ i ರಿಂದ iii ರವರೆಗೆ ಸೂಚಿಸಲಾದ ದಿನಗಳಿಗೆ ಶಿಕ್ಷಕರು/ಮುಖ್ಯ ಶಿಕ್ಷಕರು/ಸಮೂಹ ಸಂಪನ್ಮೂಲ ವ್ಯಕ್ತಿಗಳಿಗೆ ಪ್ರತಿ ದಿನಕ್ಕೆ ರೂ 250 ರಂತೆ ಸಂಭಾವನೆಯನ್ನು ಪಾವತಿಸಲು ಸಹ ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ. ಈ ಸಂಭಾವನೆಯು ಕರ್ನಾಟಕ ನಾಗರಿಕ ಸೇವೆಗಳ ನಿಯಮಗಳಡಿ ರಜಾ ಅವಧಿಯಲ್ಲಿನ ಕೆಲಸಕ್ಕಾಗಿ ಅನುಮತಿಸಿರುವ ಗಳಿಕೆ ರಜೆಯ ಬದಲಿಗೆ ನೀಡಲಾಗುತ್ತಿದೆ.

3. ಆದಾಗ್ಯೂ ಯಾವುದೇ ಅಂಥಹ ನೌಕರರು ಸಂಭಾವನೆ ಬದಲಿಗೆ ಗಳಿಕೆ ರಜೆಯನ್ನೇ ಪಡೆಯಲು ಇಚ್ಚಿಸಿದರೆ, ಸಂಬಂಧಿಸಿದ ಸಹಾಯಕ ನಿರ್ದೇಶಕರು (ಮಧ್ಯಾಹ್ನ ಬಿಸಿ ಊಟ ಕಾರ್ಯಕ್ರಮ) ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಿ ಹಾಗೆ ಮಾಡಬಹುದು.

4. ಮೇಲೆ (i) ಮತ್ತು (ii) ರಂತೆ ನಿಯೋಜಿಸಲಾದ ಶಿಕ್ಷಕರು/ಮುಖ್ಯ ಶಿಕ್ಷಕರ ಸಂಭಾವನೆಯ ಅಂದಾಜು ವೆಚ್ಚ ರೂ 30.64 ಕೋಟಿಗಳನ್ನು ಈಗಾಗಲೇ ಆರ್ಥಿಕ ಇಲಾಖೆಯು ಮಧ್ಯಾಹ್ನ ಬಿಸಿ ಊಟ ಕಾರ್ಯಕ್ರಮಕ್ಕಾಗಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಲೆಕ್ಕ ಶೀರ್ಷಿಕೆ 2202-00-101-0-18-050 (ಅಕ್ಷರ ದಾಸೋಹ) ಜಿಲ್ಲಾವಲಯದಿಂದ ಭರಿಸತಕ್ಕದ್ದು.

5. ಪ್ಯಾರ 1(iii) ರಂತೆ ನಿಯೋಜಿಸಲಾಗುವ ಶಿಕ್ಷಕರ/ಸಮೂಹ ಸಂಪನ್ಮೂಲ ವ್ಯಕ್ತಿಗಳ ಸಂಭಾವನೆಗಾಗಿ ಅಂದಾಜಿಸಲಾದ ಮೊತ್ತ ರೂ 6.7 ಕೋಟಿಗಳನ್ನು ಲೆಕ್ಕ ಶೀರ್ಷಿಕೆ 2202-80-800-0-48-050 (ಶಿಕ್ಷಣ ಗುಣಮಟ್ಟ ಅಭಿವೃದ್ಧಿ ಕಾರ್ಯಕ್ರಮ)ದಿಂದ ಭರಿಸತಕ್ಕದ್ದು.

6. ಸಂಬಂಧಿಸಿದ ತಾಲ್ಲೂಕಿನ ಸಹಾಯಕ ನಿರ್ದೇಶಕರು (ಮಧ್ಯಾಹ್ನ ಬಿಸಿ ಊಟ ಕಾರ್ಯಕ್ರಮ) ಇವ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅನುಮೋದನೆ ಪಡೆದು ಪ್ಯಾರ 1(i), 1(ii) ಮತ್ತು 4 ರಲ್ಲಿನ ವೆಚ್ಚವನ್ನು ಭರಿಸಲು

...4

MAHANTAGOUD T PATIL SWCM.KSPSTA

7. ಪ್ಯಾರ 1(iii) ಮತ್ತು 5 ರಲ್ಲಿನ ವೆಚ್ಚವನ್ನು ಭರಿಸಲು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಧಿಕೃತಗೊಳಿಸಲಾಗಿದೆ. ಇದಕ್ಕೆ ಅಗತ್ಯವಿರುವ ಅನುದಾನವನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಬಿಡುಗಡೆಗೊಳಿಸತಕ್ಕದ್ದು.

8. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 260 ವೆಚ್ಚ-8/2017, ದಿನಾಂಕ 12.04.2017ರ ಸಹಮತಿಯನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2017 ದಿನಾಂಕ 05.04.2017ರಲ್ಲಿ ಇಲಾಖಾ ಮುಖ್ಯಸ್ಥರಿಗೆ ಪ್ರತ್ಯಾಯೋಜಿಸಲಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

3/4

(ಅಶ್ವಥ್ ಪಾಳವಟೆ)
ಸರ್ಕಾರದ ಉಪ ಕಾರ್ಯದರ್ಶಿ (ಯೋಜನೆ)
ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು
ಶಿಕ್ಷಣ ಇಲಾಖೆ

ಇವರಿಗೆ-

1. ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕಣ ಇಲಾಖೆ, ಬೆಂಗಳೂರು
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
4. ನಿರ್ದೇಶಕರು, ಡಿಎಸ್‌ಇಆರ್‌ಟಿ, ಬೆಂಗಳೂರು
5. ಸಹ ನಿರ್ದೇಶಕರು, ಮಧ್ಯಾಹ್ನ ಬಿಸಿ ಊಟ ಕಾರ್ಯಕ್ರಮ, ಬೆಂಗಳೂರು
6. ಸರ್ಕಾರದ ಉಪ ಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
7. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು
8. ಉಪ ನಿರ್ದೇಶಕರು, ಖಜಾನಾ ಗಣಕ ಕೇಂದ್ರ, #49, ಖನಿಜ ಭವನ, ಬೆಂಗಳೂರು
9. ಸಾಪ್ತಾಹಿಕ ರಾಜ್ಯ ಪತ್ರ/ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು

ಪ್ರತಿ ಮಾಹಿತಿಗಾಗಿ

1. ಅಪರ ಮುಖ್ಯ ಕಾರ್ಯದಶಿಯವರ ಆಪ್ತ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು
2. ಆಂತರಿಕ ಆರ್ಥಿಕ ಸಲಹೆಗಾರರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು
3. ಮಾನ್ಯ ಪ್ರಾಥಮಿಕ ಮತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು
4. ಸಹಾಯಕರು, ಖಜಾನೆ-2, ಯೋಜನಾ ಶಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು